ಅ) ಹೌದು

ಆ) ಪ್ರತಿ ಹಳ್ಳಿಯಲ್ಲಿ ಎಲ್ಲಾ ಜನಾಂಗದವರಿಗೆ ರುದ್ರ ಭೂಮಿಗಾಗಿ ಜಮೀನನ್ನು ಕಾಯ್ದಿರಿಸಲು ಪ್ರತಿ ಸಾಲಿನ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಯ ಅವಕಾಶ ಕಲ್ಪಿಸಲು ಈ ಮೊದಲೇ ಸರ್ಕಾರವು ಕ್ರಮ ಕೈಗೊಂಡಿದೆ. ಅದಲ್ಲದೆ ಭೂಸ್ವಾಧೀನತೆಯಿಂದಾಗಿ ಜಮೀನು ಕಾಯ್ದಿರಿಸಲು ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಆಶ್ರಯ . ಯೋಜನೆ ಮಾದರಿ ನೇರವಾಗಿ ಜಮೀನುಗಳನ್ನು ಕೊಂಡುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ರಾಜ್ಯದಲ್ಲಿನ ಉಪ-ನೋಂದಣಾಧಿಕಾರಿ ಕಛೇರಿಗಳಲ್ಲಿ ನೋಂದಾದ ಪತ್ರಗಳನ್ನು ಪಡೆಯಲು ತಡವಾಗುತ್ತಿರುವ ಬಗ್ಗೆ.

137 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ಉಪ-ನೋಂದಣಿ ಕಛೇರಿಗಳಿಂದ ನೋಂದಣಿಯಾಗಿರುವ ದಸ್ತಾವೇಜುಗಳ ಪ್ರತಿಗಳನ್ನು ಕ್ರಯದಾರರು ಮತ್ತು ಖರೀದಿದಾರರು ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದರೆ, ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡು ಕ್ರಮವೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) ನೋಂದಣಿಯಾದ ದಸ್ತಾವೇಜುಗಳನ್ನು ಸಂಪುಟಗಳಲ್ಲಿ ಕೈ ಬರವಣಿಗೆ ಮೂಲಕ ಪ್ರತಿ ಮಾಡುವ ಪದ್ಧತಿಯ ಬದಲಿಗೆ ದಸ್ತಾವೇಜುಗಳ ಪ್ರತಿಗಳನ್ನು ಫೈಲಿಂಗ್ ಮಾಡುವ ಪದ್ಧತಿಯನ್ನು ಜಾರಿಗೆ ತರುವ ಮೂಲಕ ನೋಂದಾಯಿತ ದಾಖಲೆಯನ್ನು ತ್ವರಿತವಾಗಿ ಹಿಂದಿರಿಗಿಸಬಹುದಾಗಿದೆ. ಈ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ನಗರ ಹಾಗೂ ಗ್ರಾಮೀಣ ಸಾರಿಗೆಯ ದರ ಕುರಿತು

40 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಗರ ಮತ್ತು ಗ್ರಾಮೀಣ ಸಾರಿಗೆಯಲ್ಲಿ ಪ್ರತೀ ಹಂತಕ್ಕೆ ಪ್ರತೀ ಪ್ರಯಾಣಿಕರಿಗೆ ವಿಧಿಸುತ್ತಿರುವ ವಿವಿಧ ಪ್ರಯಾಣ ದರಗಳು*

ಆ) *ನಗರ ಸಾರಿಗೆಯಲ್ಲಿ (ಪ್ರತಿ ಹಂತಕ್ಕೆ) ವಿಧಿಸುತ್ತಿರುವ ದರ?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ವಿವಿಧ ಪ್ರಯಾಣ ದರವನ್ನು ವಿವಿಧ ರೀತಿಯ ಸಾರಿಗೆ ಸೌಲಭ್ಯಕ್ಕೆ ನಿಗಧಿಪಡಿಸಲಾಗಿದೆ. ಪ್ರತೀ ಪ್ರಯಾಣಿಕರ ಕಿ.ಮೀ.ನ ಸರಾಸರಿ ದರದ ವಿವರಗಳನ್ನು ಈ ಕೆಳಗೆ (ಪೈಸೆಗಳಲ್ಲಿ) ನೀಡಲಾಗಿದೆ.

ಸಾರಿಗೆಯ ಬಗೆ	ಪ್ರತೀ ಪ್ರಯಾಣಿಕರ ಕಿ.ಮೀ.ನ ಸರಾಸರಿ ದರ (ಪೈಸೆಗಳಲ್ಲಿ)
ಸಾಧಾರಣ ಸಾರಿಗೆ	16.47
ವೇಗದೂತ ಸಾರಿಗೆ	18.76
ಅರೆ ಸುಖಾಸೀನ	23.29